ಕೊಡಬಲ್ಲರು. ಇಲ್ಲಿ ಗುರುವು ಇಚ್ಛಾಮಾತ್ರದಿಂದ ತನ್ನ ಆಧ್ಯಾತ್ಮಿಕ ಶಕ್ತಿಯನ್ನು ಶಿಷ್ಯನಲ್ಲಿ ಪ್ರವೇಶಿಸುವಂತೆ ಮಾಡಿ ಅವನಲ್ಲಿ ದಿವ್ಯಜ್ಞಾನವನ್ನು ಉಂಟುಮಾಡುತ್ತಾನೆ. ಆದರೆ ಯಾರಲ್ಲಿ ಗುರುಭಾವವು ತನ್ನ ಪರಾಕಾಷ್ಠೆಯನ್ನು ಮುಟ್ಟಿ ದಿವ್ಯಭಾವವಾಗಿ ಮಾರ್ಪಟ್ಟಿರುತ್ತದೆಯೋ, ಅಂಥವರು ಮಾತ್ರವೇ ಶಾಂಭವೀ ದೀಕ್ಷೆಯನ್ನು ನೀಡಬಲ್ಲರು.

ತಂತ್ರಶಾಸ್ತ್ರಗಳಿಂದ ಕೆಲವು ಶ್ಲೋಕಗಳನ್ನು ಉದ್ಧರಿಸುತ್ತಾ ಸ್ವಾಮಿ ಶಾರದಾನಂದರು ಶಾಂಭವೀ ದೀಕ್ಷೆಯ ಕ್ರಮವನ್ನು ವಿವರಿಸುತ್ತಾರೆ. ಈ ದೀಕ್ಷಾಕ್ರಮದಲ್ಲಿ ಗುರುವಿನ ಮನಸ್ಸಿನಲ್ಲಿ ದೀಕ್ಷೆ ನೀಡುತ್ತೇನೆಂದಾಗಲೀ ಅಥವಾ ಶಿಷ್ಯನ ಮನಸ್ಸಿನಲ್ಲಿ ಅದನ್ನು ಪಡೆಯಬೇಕೆಂದಾಗಲೀ ಪೂರ್ವಸಂಕಲ್ಪ ಇರುವುದಿಲ್ಲ. ಪರಸ್ಪರರನ್ನು ನೋಡಿದಾಕ್ಷಣವೇ ಗುರುವಿಗೆ ಶಿಷ್ಯನ ಮೇಲೆ ಕರುಣೆ ಉದಯಿಸಿ, ಅವನ ಮೇಲೆ ಕೃಪೆದೋರುವ ಇಚ್ಛೆಯಾಗುತ್ತದೆ. ಗುರುವು ತನ್ನ ಮಾತಿನ ಮೂಲಕವೋ, ಸ್ಪರ್ಶದ ಮೂಲಕವೋ ಅಥವಾ ಇನ್ನು ಕೆಲವು ವೇಳೆ ತನ್ನ ಕೃಪಾದೃಷ್ಟಿಮಾತ್ರದಿಂದಲೇ ಶಿಷ್ಯನಲ್ಲಿ ಆಧ್ಯಾತ್ಮಿಕ ಭಾವವನ್ನು ಜಾಗೃತಗೊಳಿಸುತ್ತಾನೆ. 'ಶ್ರೀರಾಮಕೃಷ್ಣ ಲೀಲಾಪ್ರಸಂಗ' ದಲ್ಲಿ ಈ ಎಲ್ಲಾ ಬಗೆಯ ದೀಕ್ಷಾವಿಧಾನಗಳಿಗೂ ನಮಗೆ ಸಾಕಷ್ಟು ಉದಾಹರಣೆಗಳು ದೊರಕುತ್ತವೆ. ತಮ್ಮ ಅವತಾರವನ್ನು ಸಮಾಪ್ತಿಗೊಳಿಸುವುದಕ್ಕೆ ಕೆಲವು ದಿನಗಳ ಮುಂಚೆ ಕಾಶೀಪುರದ ತೋಟದ ಮನೆಯಲ್ಲಿ, ತಮ್ಮಲ್ಲಿ ಆವಿರ್ಭಾವವಾಗಿರುವ ಶಕ್ತಿಯ ಅಗಾಧತೆಯ ಬಗ್ಗೆ ತಮಾಷೆ ಮಾಡುತ್ತ ಶ್ರೀರಾಮಕೃಷ್ಣರೇ ಅಲ್ಲಿದ್ದ ಭಕ್ತರಿಗೆ ಹೇಳುತ್ತಾರೆ, "ಮಾತೆಯು ತೋರಿಸಿರುವಳು, ಈಗ ಇಲ್ಲಿ ಎಂಥಾ ಶಕ್ತಿ ಇದೆಯೆಂದರೆ ನಾನು ಜನರನ್ನು ಸ್ಪರ್ಶಿಸಬೇಕಾಗಿಯೂ ಇಲ್ಲ. ನಾನು ನಿಮಗೆ ಅವರನ್ನು ಸ್ಪರ್ಶಿಸಲು ಹೇಳುತ್ತೇನೆ. ನಿಮ್ಮ ಸ್ಪರ್ಶದಿಂದಲೇ ಅವರ ಚೈತನ್ಯ ಜಾಗೃತವಾಗುವುದು. ತಾಯಿಯು ಈಗ ಇದನ್ನು (ದೇಹವನ್ನು) ಗುಣಪಡಿಸಿದರೆ ಎಷ್ಟೊಂದು ಜನ ಬಂದು ಮುತ್ತುತ್ತಾರೆಂದರೆ ನಿಮಗೆ ಆ ಜನಜಂಗುಳಿಯನ್ನು ಹೊರಗೆ ತಳ್ಳಲು ಸಾಧ್ಯವೇ ಆಗುವುದಿಲ್ಲ. ನೀವು ಎಷ್ಟು ಕಷ್ಟಪಡಬೇಕಾಗುವುದೆಂದರೆ ನಿಮ್ಮ ದೇಹದ ನೋವನ್ನು ಗುಣಪಡಿಸಿಕೊಳ್ಳಲು ಔಷಧಿ ತೆಗೆದುಕೊಳ್ಳಬೇಕಾಗುತ್ತದೆ!" (ಭಾಗ ೨, ಪುಟ ೧೩೭).

ಈ ದಿವ್ಯಭಾವದಲ್ಲಿ ಶ್ರೀರಾಮಕೃಷ್ಣರು ಏನೆಲ್ಲ ಮಾಡಿದರು ಎನ್ನುವ ಒಂದು ಪಟ್ಟಿಯನ್ನು ಸ್ವಾಮಿ ಶಾರದಾನಂದರು ನೀಡುತ್ತಾರೆ. ಅದು ಹೀಗಿದೆ:

೧. **ಶ್ರೀರಾಮಕೃಷ್ಣರು ತಮ್ಮ ಸಹಧರ್ಮಿಣಿಯಾದ ಶ್ರೀಶಾರದಾದೇವಿಯವರಿಗೆ ತರಬೇತಿಯನ್ನು ನೀಡಿ, ಮುಂದೆ ಅವರು ಪ್ರಬಲ ಧರ್ಮಶಕ್ತಿಯ ಕೇಂದ್ರವಾಗುವಂತೆ ಮಾಡಿದರು.**

೨. **ಉಚ್ಚ ಜೀವನವನ್ನು ನಡೆಸುತ್ತಾ, ಕೊಲ್ಕತಾ ಮಹಾನಗರದಲ್ಲಿ ಧಾರ್ಮಿಕ ನೇತಾರರೆನಿಸಿಕೊಂಡ ವ್ಯಕ್ತಿಗಳ ಸಮೀಪಕ್ಕೆ ಹೋಗಿ, ತಮ್ಮ ಆಧ್ಯಾತ್ಮಿಕ ಶಕ್ತಿಯ ಸಹಾಯದಿಂದ ಅವರೆಲ್ಲ ತಮ್ಮ ತಮ್ಮ ಜೀವನದ ಪರಿಪೂರ್ಣತೆಯನ್ನು ಪಡೆಯಲು ಶ್ರೀರಾಮಕೃಷ್ಣರು ಸಹಾಯ ಮಾಡಿದರು.**

೩. **ದಕ್ಷಿಣೇಶ್ವರಕ್ಕೆ ಬಂದ ಎಲ್ಲ ಸಂಪ್ರದಾಯಗಳ ಜಿಜ್ಞಾಸು ವ್ಯಕ್ತಿಗಳಿಗೂ ಆಧ್ಯಾತ್ಮಿಕ ಬೆಳಕನ್ನು ಕೊಟ್ಟು ಅವರನ್ನು ತೃಪ್ತಿಪಡಿಸಿದರು.**

೪. **ಯೋಗದೃಷ್ಟಿಯಿಂದ ಹಿಂದೆ ಕಂಡ ವ್ಯಕ್ತಿಗಳು ಅವರೆಡೆಗೆ ಬಂದಾಗ, ಅವರ ಅಧಿಕಾರಭೇದಕ್ಕೆ (ಅರ್ಹತೆಗೆ) ಅನುಸಾರವಾಗಿ ಆ ವ್ಯಕ್ತಿಗಳ ಜೀವನವನ್ನು ರೂಪಿಸಲು ಪ್ರಯತ್ನಿಸಿದರು.**

೫. **ತಮ್ಮ ಬಳಿ ಬಂದವರಲ್ಲಿ, ಭಗವಂತನ ಸಾಕ್ಷಾತ್ಕಾರಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಲು ಯಾರು ಸಿದ್ಧರಿದ್ದರೋ ಅವರನ್ನು ತಮ್ಮ ಹೊಸ ಮತದ ಪ್ರಚಾರಕಾರ್ಯದಲ್ಲಿ ಪ್ರಧಾನ ಪಾತ್ರಗಳನ್ನಾಗಿ ಮಾಡಿದರು.**

೬. **ಕೊಲ್ಕತಾದಲ್ಲಿ ವಾಸಿಸುತ್ತಿದ್ದ ತಮ್ಮ ಭಕ್ತರ ಮನೆಗಳಿಗೆ ಆಗಾಗ ಹೋಗಿಬರುತ್ತಾ, ಅಲ್ಲಿ ಭಗವಂತನ ಬಗೆಗಿನ ಸಂಭಾಷಣೆ, ಸಂಕೀರ್ತನೆ ಇತ್ಯಾದಿಗಳನ್ನು ನಡೆಸುತ್ತಾ, ಅವರ ಮನೆಯವರು ಮತ್ತು ಸುತ್ತಮುತ್ತಲಿನವರು ಆಧ್ಯಾತ್ಮಿಕ ಉನ್ನತಿಯನ್ನು ಪಡೆಯಲು ಸಹಾಯ ಮಾಡಿದರು.**

೭. **ತಮ್ಮ ಭಕ್ತವೃಂದವನ್ನು ಒಂದು ಪ್ರಬಲವಾದ ಪ್ರೇಮಬಂಧನದಲ್ಲಿ ಕೂಡಿಸಿ, ಅವರೆಲ್ಲರೂ ಒಟ್ಟು ಸೇರಿ ಒಂದು ಉದಾರವಾದ ಧರ್ಮಸಂಸ್ಥೆಯನ್ನು ಸ್ಥಾಪಿಸುವಂತೆ ಮಾಡಿದರು** (*ಶ್ರೀರಾಮಕೃಷ್ಣ ಲೀಲಾಪ್ರಸಂಗ*, ಭಾಗ ೨, ಪುಟ ೨೧೭).

### ದಿವ್ಯಭಾವವಾಗಿ 'ಭಾವಮುಖ'

ಶ್ರೀರಾಮಕೃಷ್ಣರ ದಿವ್ಯಭಾವಕ್ಕೆ ಮತ್ತೊಂದು ವಿವರಣೆಯನ್ನು ನಾವು ಲೀಲಾಪ್ರಸಂಗದಲ್ಲಿ ಕಾಣಬಹುದು. ಅದ್ವೈತ ಸಾಧನೆಯ ಫಲವಾಗಿ ತಾವು ಪಡೆದುಕೊಂಡ ನಿರ್ವಿಕಲ್ಪ ಸಮಾಧಿಯಲ್ಲಿ ಶ್ರೀರಾಮಕೃಷ್ಣರು ಸತತವಾಗಿ ಆರು

ತಿಂಗಳುಗಳ ಕಾಲ ಮುಳುಗಿದ್ದರು. ಅನಂತರ ಅವರಿಗೆ ಜಗನ್ಮಾತೆ ಆದೇಶವಿತ್ತಳು, "ಭಾವಮುಖದಲ್ಲಿರು" ಎಂದು. ವೇದಾಂತ ಚಿಂತನಾಲೋಕಕ್ಕೇ ಹೊಸದಾದ 'ಭಾವಮುಖ'ದ ಪರಿಕಲ್ಪನೆಯನ್ನು ಸ್ವಾಮಿ ಶಾರದಾನಂದರು ತಮ್ಮ ಕೃತಿಯಲ್ಲಿ ವಿಶದವಾಗಿ ಚರ್ಚಿಸಿದ್ದಾರೆ.

ನಿರ್ವಿಕಲ್ಪ ಸಮಾಧಿಯಲ್ಲಿ ವ್ಯಕ್ತಿಯ 'ಅಹಮ್' ಸಂಪೂರ್ಣವಾಗಿ ನಾಶವಾಗಿ ಹೋಗಿರುತ್ತದೆ. ಶ್ರೀರಾಮಕೃಷ್ಣರ ಮನಸ್ಸು ನಿರ್ವಿಕಲ್ಪ ಸಮಾಧಿಯಿಂದ ಕೆಳಗಿಳಿದಾಗ ಅವರ 'ಅಹಮ್' ಪುನಃ ಅಲ್ಪಪ್ರಮಾಣದಲ್ಲಿಯಾದರೂ ಮತ್ತೆ ತಲೆ ಎತ್ತುವುದು. ಆದರೆ ಈಗ ಅದು ಮುಂಚಿನ 'ಅಪಕ್ವ ಅಹಮ್' ಆಗಿರುವುದಿಲ್ಲ. ಸಾಮಾನ್ಯ ಜನರಿಗೆ ಜಡದಂತೆ ತೋರಿಬರುವ ಪ್ರಪಂಚ ಅವರಿಗೆ ಆಗ ಅನಂತ ಆಲೋಚನೆಗಳು ಪ್ರತಿಕ್ಷಣವೂ ಹುಟ್ಟುಪಡೆದು ಕೆಲಕ್ಷಣದ ನಂತರ ಲಯವಾಗುವ ಒಂದು 'ವಿಶ್ವಮನ'ದಂತೆ (Immense mind) ಕಂಡುಬರುತ್ತಿತ್ತು. ತಮ್ಮ ಸ್ವಂತದ್ದನ್ನೂ ಒಳಗೊಂಡಂತೆ ಇತರರೆಲ್ಲರ 'ಶರೀರ–ಮನಸ್ಸು–ಅಹಮ್'ಗಳೆಲ್ಲವೂ ಆ ವಿಶ್ವಮನದಲ್ಲಿ ಕೇವಲ ಸಣ್ಣ ಸಣ್ಣ ಅಲೆಗಳಾಗಿ ಅವರಿಗೆ ತೋರಿಬರುತ್ತಿತ್ತು. ಅಷ್ಟೇ ಅಲ್ಲದೇ ಅತ್ಯಂತ ಸ್ಥೂಲ ಭೌತಿಕ ವಸ್ತುವಿನಿಂದ ಹಿಡಿದು ಬ್ರಹ್ಮದವರೆಗೆ ಎಲ್ಲವನ್ನೂ ಒಂದು 'ವಿಶ್ವ ಅಹಮ್' ವ್ಯಾಪಿಸಿಕೊಂಡಿರುವುದು ಅವರಿಗೆ ಅನುಭವವಾಗುತ್ತಿತ್ತು. ಸಾಕಾರ, ನಿರಾಕಾರಗಳ ಮಧ್ಯೆ ಇರುವ ಮತ್ತು ಈಶ್ವರನ ಅಥವಾ ಜಗನ್ಮಾತೆಯ 'ಅಹಮ್'ಗಿಂತ ಬೇರೆಯಲ್ಲದ ಈ 'ವಿಶ್ವ ಅಹಮ್' ಅನ್ನೇ 'ಭಾವಮುಖ' ಎಂದು ಕರೆಯುವುದು.

ಆದ್ದರಿಂದ ಶ್ರೀರಾಮಕೃಷ್ಣರಿಗೆ ಜಗನ್ಮಾತೆ ಇತ್ತ ಆದೇಶದ ಅರ್ಥ ಹೀಗಿದೆ: "ಅಹಂಭಾವವನ್ನು ಸಂಪೂರ್ಣವಾಗಿ ಲಯಗೊಳಿಸಿ ನಿರ್ಗುಣಭಾವದಲ್ಲಿ ಇರಬೇಡ, ಯಾವುದರಿಂದ ಅನಂತ ವಿಶ್ವಭಾವಗಳು ಉಂಟಾಗುತ್ತಿವೆಯೋ ಆ ವಿಶ್ವ–ಅಹಮ್ ನೀನಾಗಿರುವೆ, ಅದರ ಇಚ್ಛೆಯೇ ನಿನ್ನ ಇಚ್ಛೆ, ಅದರ ಕಾರ್ಯವೇ ನಿನ್ನ ಕಾರ್ಯ – ಈ ಭಾವವನ್ನು ಯಾವಾಗಲೂ ಸರಿಯಾದ ರೀತಿಯಲ್ಲಿ ಅನುಭವಿಸುತ್ತ ಜೀವನಯಾಪನೆ ಮಾಡು ಮತ್ತು ಲೋಕಕಲ್ಯಾಣವನ್ನು ಸಾಧಿಸು" (ಭಾಗ ೧, ಪುಟ ೪೩೪). ಶ್ರೀರಾಮಕೃಷ್ಣರು ತಮ್ಮ ದೇಹಾವಸಾನವಾಗುವವರೆಗೂ ಜಗನ್ಮಾತೆಯ ಆದೇಶದಂತೆ ನಡೆದರು ಎಂದು ಬೇರೆ ಹೇಳಬೇಕಾಗಿಲ್ಲ. ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿ ಪ್ರತಿನಿತ್ಯವೂ ಭಾವಮುಖಿಗಳಾಗಿ ಭಕ್ತರನ್ನು ಅನುಗ್ರಹಿಸುತ್ತಿದ್ದದ್ದನ್ನು ಸ್ವಾಮಿ ಶಾರದಾನಂದರೇ ಸಾಕ್ಷಾತ್ತಾಗಿ ನೋಡಿದ್ದರು. ಇದೇ ಭಾವದಲ್ಲಿಯೇ ಅವರು ಜನವರಿ ೧, ೧೮೮೬ ರಂದು 'ಕಲ್ಪತರು'ವಾಗಿ ಭಕ್ತರನ್ನು ವಿಶೇಷವಾಗಿ ಅನುಗ್ರಹಿಸಿದ್ದು ಈಗ ಜಗತ್ಪ್ರಸಿದ್ಧವಾಗಿದೆ.

ಶ್ರೀರಾಮಕೃಷ್ಣರನ್ನು 'ಭಾವಸಾಗರ' ಎಂದು ಸ್ವಾಮಿ ವಿವೇಕಾನಂದರು ಸ್ತುತಿಸಿದ್ದಾರೆ. ನಮ್ಮಂಥವರ ಕಲ್ಪನೆಗೂ ಎಟುಕದ ಅವರ ಭಾವಗಳನ್ನು, ಅದರಲ್ಲೂ ಅತ್ಯುತ್ಕೃಷ್ಟವಾದ ದಿವ್ಯಭಾವವನ್ನು, ಸ್ವಾಮಿ ಶಾರದಾನಂದರು ತಮ್ಮ ಗ್ರಂಥದಲ್ಲಿ ಅನೇಕ ದೃಷ್ಟಿಕೋನಗಳಿಂದ ವಿವರಿಸಿದ್ದಾರೆ. ಆ ಮೂಲಕ ಶ್ರೀರಾಮಕೃಷ್ಣರ ಮಹಿಮೆಯನ್ನು ನಾವು ಕಿಂಚಿತ್ತಾದರೂ ಅರಿತುಕೊಳ್ಳುವಂತೆ ಮಾಡಿದ್ದಾರೆ. •

## ಶ್ರೀರಾಮಕೃಷ್ಣ ಸಂಭಾಷಣಾ ಸುಧೆ

ಮಾಸ್ಟರ್ (ವಿನಯದಿಂದ) : **"ಸಂಸಾರದಲ್ಲಿ ಯಾವ ರೀತಿಯಾಗಿ ಇರಬೇಕು?"**

**ಶ್ರೀರಾಮಕೃಷ್ಣರು: "ಎಲ್ಲಾ ಕೆಲಸಕಾರ್ಯಗಳನ್ನೂ ಮಾಡು, ಆದರೆ ಮನಸ್ಸನ್ನು ಮಾತ್ರ ಭಗವಂತನ ಪಾದಪದ್ಮಗಳಲ್ಲಿ ಇಡು. ಎಲ್ಲರೊಡನೆ, ಎಂದರೆ ಹೆಂಡತಿ, ಮಕ್ಕಳು, ತಂದೆ, ತಾಯಿ, ಇವರೊಡನೆ ಇರು. ಅವರ ಸೇವೆ ಮಾಡು. ಅವರನ್ನೆಲ್ಲಾ ನಿನ್ನ ಪರಮ ಆಪ್ತರೆಂದೇ ಕಾಣು; ಆದರೆ ಅವರಾರೂ ನಿನಗೆ ಸೇರಿದವರಲ್ಲ ಎಂಬುದು ನಿನ್ನ ಹೃದಯಾಂತರಾಳದಲ್ಲಿ ನೆಲಸಿರಲಿ.**

**"ಶ್ರೀಮಂತರ ಮನೆಯ ದಾಸಿ ಎಲ್ಲಾ ಕೆಲಸಕಾರ್ಯಗಳನ್ನೂ ಮಾಡುತ್ತಾಳೆ, ಆದರೆ ಆಕೆಯ ಮನಸ್ಸು ಮಾತ್ರ ಹಳ್ಳಿಯಲ್ಲಿರುವ ತನ್ನ ಮನೆಯ ಕಡೆಗೇ. ಯಜಮಾನನ ಮಕ್ಕಳು ತನ್ನವೆಂದೇ ಬೆಳೆಸುತ್ತಾಳೆ. ಅಷ್ಟೇ ಅಲ್ಲ, ಆ ಮಕ್ಕಳನ್ನು ಕರೆಯುತ್ತಾಳೆ, 'ನನ್ನ ರಾಮ, ನನ್ನ ಹರಿ' ಎಂಬುದಾಗಿ. ಆದರೆ ಅವಾವುವೂ ತನ್ನವಲ್ಲವೆಂಬುದು ಆಕೆಗೆ ಹೃದಯದಲ್ಲಿ ಚೆನ್ನಾಗಿ ಗೊತ್ತಿದೆ.**


**"ಭಗವಂತನಲ್ಲಿ ಭಕ್ತಿ ಬೆಳೆಸಿಕೊಳ್ಳುವುದಕ್ಕೆ ಮುನ್ನ ಸಂಸಾರಕ್ಕೆ ಕಾಲಿಟ್ಟೆ ಎಂದರೆ, ಇನ್ನೂ ಅಧಿಕಾಧಿಕವಾಗಿ ಕಷ್ಟಪರಂಪರೆಗಳಿಗೆ ಈಡಾಗುವೆ. ಶೋಕ, ತಾಪ, ವಿಪತ್ತು ಇವುಗಳಿಂದ ಸಂಪೂರ್ಣ ಬೆಂದು ಬೆಂಡಾಗಿಹೋಗುವೆ. ವಿಷಯಚಿಂತನೆ ಮಾಡಿದಷ್ಟೂ ಅವುಗಳಲ್ಲಿ ಆಸಕ್ತಿಯೂ ಬೆಳೆಯುತ್ತಾ ಹೋಗುತ್ತದೆ.**

**"ಸಂಸಾರವೇ ನೀರು, ಮನಸ್ಸೇ ಹಾಲು. ಹಾಲನ್ನು ನೀರಿಗೆ ಸುರಿದರೆ ಅವೆರಡೂ ಬೆರೆತು ಒಂದಾಗಿಬಿಡುತ್ತವೆ; ಮತ್ತೆ ಶುದ್ಧ ಹಾಲು ಬೇಕೆಂದರೆ ಕಣ್ಣ ಮೇಲೆ ಕಣ್ಣಿಟ್ಟು ಹುಡುಕಿದರೂ ಅದು ದೊರೆಯುವ ಹಾಗೇ ಇಲ್ಲ. ಆದರೆ ಹಾಲಿಗೆ ಹೆಪ್ಪು ಹಾಕಿ ಮೊಸರು ಮಾಡಿ ಬೆಣ್ಣೆ ತೆಗೆದು ಅದನ್ನು ನೀರಿನಲ್ಲಿ ಇಟ್ಟರೆ, ಅದು ಅಲ್ಲಿ ತೇಲಲಾರಂಭಿಸುತ್ತದೆ.**

**"ಮೊದಲು ಕೈಗೆ ಎಣ್ಣೆ ಸವರಿಕೊಂಡು ಹಲಸಿನಹಣ್ಣು ಬಿಡಿಸಬೇಕು. ಇಲ್ಲದಿದ್ದರೆ ಕೈಗೆ ಅಂಟು ಹತ್ತಿಕೊಂಡುಬಿಡುತ್ತದೆ. ಭಗವದ್ಭಕ್ತಿ ಎಂಬ ಎಣ್ಣೆಯನ್ನು ಮೊದಲು ಹವಣಿಸಿಕೊಂಡು ಬಳಿಕ ಸಾಂಸಾರಿಕ ಕೆಲಸಕಾರ್ಯಗಳಲ್ಲಿ ಕೈ ಇಡಬೇಕು."** (ಸಂಗ್ರಹ: *ಸ್ವರ್ಣಗೌರಿ*)

# ಮಹಾಶಿವರಾತ್ರಿಯ ಆಧ್ಯಾತ್ಮಿಕ ಮಹತ್ವ

ಪ್ರೊ. ಟಿ.ಎಂ. ಪಂಡಿತ್



ಶಿವ ಎಂದರೆ ಮಂಗಳ ಎಂದರ್ಥ. ಶಿವನ ಸ್ಮರಣೆ ಮಂಗಳವನ್ನು ಉಂಟುಮಾಡುತ್ತದೆ. ಅದಕ್ಕೆ ಪ್ರಾಮುಖ್ಯತೆ ನೀಡುವುದೇ ಶಿವರಾತ್ರಿ. ಇದರ ಪೌರಾಣಿಕ ಮತ್ತು ಆಧ್ಯಾತ್ಮಿಕ ಮಹತ್ವವನ್ನು ರೋಚಕವಾಗಿ ತಿಳಿಹೇಳಿರುವ ಲೇಖಕರು ಉತ್ತರಕನ್ನಡ ಜಿಲ್ಲೆಯ ಅಘನಾಶಿನಿಯವರು. ಇವರ ಕೆಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

**ಶಿ**ವನು ಭಕ್ತರಿಗೆ ಸುಖವನ್ನು ಕೊಡುವವನಾದುದರಿಂದ **ಶಂಭು**; ಜೀವರನ್ನು ಸಂಸಾರಬಂಧನದಿಂದ ಬಿಡಿಸಿ ಪಾಲಿಸುವವನಾದುದರಿಂದ **ಪಶುಪತಿ**; ಕೈಲಾಸದ ಒಡೆಯನಾದುದರಿಂದ **ಗಿರೀಶ**; ಸಕಲ ಚರಾಚರ ವಸ್ತುಗಳೂ ಇವನ ನಿಯಂತ್ರಣಕ್ಕೆ ಒಳಪಟ್ಟಿರುವುದರಿಂದ **ಈಶ್ವರ**; ಜಟೆಯಲ್ಲಿ ಗಂಗೆಯನ್ನು ಧರಿಸಿದ **ಗಂಗಾಧರ**; ಮೈತುಂಬ ಚೆಲುವನ್ನೇ ತುಂಬಿಕೊಂಡಿರುವ ಸೌಂದರ್ಯದಧಿದೇವಿ ಪಾರ್ವತಿಯನ್ನು ವಿವಾಹವಾದ **ಪಾರ್ವತೀರಮಣ**; ಕಾಳಹಸ್ತಿ ಗಿರಿಪ್ರದೇಶದ ವಿಶಾಲವನದಲ್ಲಿ ಅಲೆದಾಡುತ್ತಿದ್ದ ಮುಗ್ಧ ಕಣ್ಣಪ್ಪನ ಭಕ್ತಿಗೆ ಮೆಚ್ಚಿ ವರಪ್ರಸಾದವಿತ್ತ **ಶಿವಾನಂದ**; ಕೋಳೂರ ಕೊಡಗೂಸಿನ ಸರಳ ಭಕ್ತಿಗೆ ಮನಸೋತು ಅವಳು ಕೊಟ್ಟ ಹಾಲನ್ನು ಕುಡಿದ **ತತ್ಪುರುಷ**; ಭಕ್ತಿಯಿಂದ ಭಜಿಸಿದವರಿಗೆ ಅವರ ಇಷ್ಟಾರ್ಥವನ್ನು ಕ್ಷಣಾರ್ಧದಲ್ಲಿ ಪೂರೈಸುವ **ಭೋಳಾ ಶಂಕರ**. ತ್ರಿಮೂರ್ತಿಗಳಲ್ಲಿ ಒಬ್ಬನಾದ ಇವನು ಇಚ್ಛಾಶಕ್ತಿ, ಕ್ರಿಯಾಶಕ್ತಿ ಮತ್ತು ಜ್ಞಾನಶಕ್ತಿಗಳನ್ನು ಅನುಗ್ರಹಿಸುವ **ತ್ರ್ಯಂಬಕನೂ** ಹೌದು. ಭಕ್ತರಿಗೆ ಶುಭವನ್ನುಂಟುಮಾಡುವುದರಿಂದ **ಶಂಕರನು**. ಕಾಮನನ್ನು ನಿಗ್ರಹಿಸಿದ್ದರಿಂದ **ಕಾಮಾರಿ**. ಸುದೃಢವಾದ, ತ್ರಿಪುರವೆಂದು ಪ್ರಸಿದ್ಧವಾದ ಮೂರು ಅಸುರರ ಮೂರು ಪಟ್ಟಣಗಳನ್ನು ನಾಶಗೊಳಿಸಿದ್ದರಿಂದ **ತ್ರಿಪುರಾಂತಕ**. ಮೃತ್ಯುವನ್ನೇ ಜಯಿಸಿದವನಾದ್ದರಿಂದ **ಮೃತ್ಯುಂಜಯ**. ದೇವತೆಗಳಿಂದ ಹಿಡಿದು ಸಕಲರಿಗೂ ಉಪಾಸ್ಯಮೂರ್ತಿಯಾದುದರಿಂದ ಶಿವನಿಗೆ **ಮಹಾದೇವ**ನೆಂಬ ಗುಣ ಗೌರವ. ಶಿವನಿಗೆ **ಲಯಕರ್ತ**ನೆಂದೂ ಹೇಳುವುದುಂಟು. ಸೃಷ್ಟಿ, ಸ್ಥಿತಿ, ಲಯಗಳು ಚರಾಚರ ಜಗತ್ತಿನ ಪ್ರಮುಖ ಆಯಾಮಗಳು. ಆದರೆ ಇಲ್ಲಿ ಲಯವೆಂದರೆ ನಾಶವೆಂದು ಅರ್ಥವಲ್ಲ. ಲಯವೆಂದರೆ ಪರಿವರ್ತನೆ. ಇದು ವಿಕಾಸದ ರಹಸ್ಯವೂ ಹೌದು, ವಿಧಾನವೂ ಹೌದು. ಸರ್ವಭೂತಗಳಲ್ಲಿಯೂ ಈಶ್ವರನ ವಿಕಾಸದ ಅಂಶವುಂಟು.

## ಮಹಾಶಿವರಾತ್ರಿ: ಮೂಲ ಎಲ್ಲಿದೆ?

ಮಾಘ ಕೃಷ್ಣ ಚತುರ್ದಶಿ ಶಿವಭಕ್ತರಿಗೆ ತುಂಬ ಮಹತ್ವದ ದಿನ, ಪರ್ವಕಾಲ. ಈ ದಿನ 'ಮಹಾಶಿವರಾತ್ರಿ' ಎಂಬುದು ಲೋಕದ ಎಣಿಕೆ. ಹಾಗಾದರೆ ಏನಿದರ ಮೂಲ? ಅಮೃತವನ್ನು ಪಡೆಯುವ ಸಲುವಾಗಿ ಸುರಾಸುರರು ಒಂದಾಗಿ ಆದಿಶೇಷನನ್ನು ಹಗ್ಗವನ್ನಾಗಿಸಿಕೊಂಡು, ಮಂದಾರ ಪರ್ವತವನ್ನು ಕ್ಷೀರಸಮುದ್ರದ ನಡುವೆ ಕಡೆದರು. ಆ ಸಮಯದಲ್ಲಿ ಕೆಳಗೆ ಆಸರೆಯಾಗಿ ವಿಷ್ಣುವು ಕೂರ್ಮಾವತಾರವನ್ನು ತಾಳಿ ನಿಂತನು. ಈ ಪ್ರಕ್ರಿಯೆಯಲ್ಲಿ ಪ್ರಪ್ರಥಮವಾಗಿ ಹೊರಬಂದ ಹಾಲಾಹಲ ಎಂಬ ಘೋರವಿಷವನ್ನು ಕಂಡು ಕಂಗಾಲಾದ ಸುರಾಸುರರು ಸ್ತಂಭೀಭೂತರಾಗಿ ನಿಂತರು. ಆಗ ಶಿವನೇ ಮುಂದೆ ಬಂದು ಆ ವಿಷವನ್ನು ಕುಡಿದನು, ಸ್ವಲ್ಪ ವಿಚಲಿತನೂ ಆದನು. ಆಗ ದೇವಗುರು ಬೃಹಸ್ಪತಿಯ ಆಣತಿಯಂತೆ ಅಶ್ವಿನಿದೇವತೆಗಳು ಶಿವನಿಗೆ ಶುಶ್ರೂಷೆ ನೀಡಿದರು. "ವಿಷ ಕುಡಿದವರು ಅಥವಾ ವಿಷವೇರಿದವರು ಶುಶ್ರೂಷೆಯ ನಂತರ ಮೊದಲ ಒಂದು ರಾತ್ರಿ ನಿದ್ರಿಸಬಾರದು. ನಿದ್ರಿಸಿದರೆ ಮರಣ ಖಂಡಿತ, ಹಾಗಾಗಿ ಈ ಹೊತ್ತು ಶಿವನು ನಿದ್ರಿಸದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ ಹಾಗೂ ಹೊಣೆಗಾರಿಕೆ" ಎಂಬುದಾಗಿ ಅಶ್ವಿನೀದೇವತೆಗಳು ಸುರಾಸುರರಿಗೆ ತಿಳಿಸಿದರು. ತಕ್ಷಣವೇ ಸಕಲ ಸುರಾಸುರರೆಲ್ಲರೂ ನಾನಾ ವಾದ್ಯಗಳನ್ನು ಬಾರಿಸುತ್ತ, ದೇಹದ ಕಲ್ಮಶವನ್ನು ದೂರಮಾಡುವ ಬಿಲ್ವಪತ್ರೆಯನ್ನು ಮತ್ತು ಎಲ್ಲ ನರಗಳಿಗೆ ಚೈತನ್ಯ ತುಂಬುವ ತುಂಬೆಹೂವುಗಳನ್ನು ತಂದು, ಶಿವನಿಗೆ